ಆದಾಗ್ಯೂ ಇಂತಹ ೫ ವರ್ಷಗಳನ್ನು ಮೀರಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ : ನೌಕರರನ್ನು ಬೇರೆ ಇಲಾಖೆಗಳಿಗೆ ಸಾಧ್ಯವಾದ ಮಟ್ಟಿಗೂ ವರ್ಗಾಯಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈಗಲೂ ಸಹ ೫ ವರ್ಷ ಅವಧಿ ಮೀರಿರುವ ಅಧಿಕಾರಿ / ನೌಕರರ ವರ್ಗಾವಣೆಗಳನ್ನು ಮಾಡಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಸಚಿವಾಲಯವು ಒಂದೇ ಘಟಕವಾಗಿದ್ದು ಸಚಿವಾಲಯದ ಇಲಾಖೆಗಳ ಮಾಡುವ ವರ್ಗಾವಣೆಗಳು ಆಂತರಿಕ ಕಾರ್ಯ ನಿರ್ವಹಣ ವ್ಯವಸ್ಥೆಯಾಗಿದೆ. ಕ್ಷೇತ್ರ ಇಲಾಖೆಗಳಲ್ಲಿನ ಸಾಮಾನ್ಯ ವರ್ಗಾವಣೆ ನೀತಿಯನ್ನು ಇಲ್ಲಿ ಅನ್ವಯ ಮಾಡುತ್ತಿಲ್ಲ.

೨. ಶ್ರೀರಂಗ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ದುರಸ್ಥಿ ಮಾಡುವುದು

SMT. DAMAYANTHI BOREGOWDA.—The income of the Sriranga patna Town Municipality is very meagro. The roads of this great Tourist centre are hopeless, The traffic is very heavy due to the increasing number of Indian and foreign tourists. Bad roads have resulted in increasing number of accidents. I request the Hon'ble Minister for Public Works to take over the roads as a special case.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—ಸನ್ಮಾನ ಸಾಸಕಿಯವಾದ ಶ್ರೀಮತಿ ದಮಯಂತಿ ಬೋರೇಗೌಡ ಅವರು ಶ್ರೀರಂಗಪಟ್ಟಣದ ಪುರಸಭೆಯ ಆದಾಯವು ಬಹಳ ಕಡಿಮೆ ಇದ್ದು ಹಾಗೂ ರಸ್ತೆಗಳು ಕೆಟ್ಟಿದೆಯೆಂದು, ಇದರಿಂದ ಅಪಘಾತಗಳು ಹೆಚ್ಚಾಗುತ್ತವೆಂದು ತಿಳಿಸುತ್ತಾ, ವಿಶೇಷಪ್ರಕರಣವೆಂದು ಪುರಸಭೆಯ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಬೇಕೆಂದು ಕೋರಿದ್ದಾರೆ.

ಪುರಸಭೆಯ ವ್ಯಾಪ್ತಿಗೆ ಬರುವ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲು ಬರುವುದಿಲ್ಲ. ಆದಾಗ್ಯೂ, ಶ್ರೀರಂಗಪಟ್ಟಣ ತಾಲ್ಲೂಕಿನ ಕೆಲವು ರಸ್ತೆಗಳನ್ನು ಶ್ರೀರಂಗಪಟ್ಟಣದ ಪ್ರವಾಸಿ ಕೇಂದ್ರದ ಪ್ರಾಮುಖ್ಯತೆಯನ್ನು ಗುರುತಿಸಿ, ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಬಹುದೇ ಎಂಬ ಬಗ್ಗೆ ಪರಿಶೀಲಿಸಿ ಮುಂದಿನಕ್ರಮ ತೆಗೆದುಕೊಳ್ಳಲಾಗುವುದು.

(೩) ಬೆಳಗಾಂ ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿ ಕಾಲರಾ ರೋಗದಿಂದ ಇಬ್ಬರು ಸತ್ತಿರುವ ಬಗ್ಗೆ

SRI K. C. MODGEKAR DESAI.—Sir, it is reported that two persons viz. Smt. Kallawwa Ramu Sanadi aged 60 years and her son Shri Parashram Sanadi aged 35 years have died of cholera at Civil Hospital, Belgaum City on 5th July 1990. They belong to Kadoli village which is 10-15 Km away from Belgaum City which comes in my constituency. This news of cholera has spread panic among the residents of Kadoli and surrounding villages. It is reported that late Kallawwa Sanadi started vomitting and diarrhoea, the symptoms of cholera on 29 th June 1990, she was admitted to the District Hospital, Belgaum. Her son Parashuram attended to his mother and he also was affected by cholera. He was admitted in the I. D. at 10.00, A. M. and died at 10.00 p. m and his mother also died immediately. She suffered Diarrohoa because she consumed contamlnated water.